ಶ್ರೀ ಎಸ್. ಎಂ. ಯಾಹ್ಯಾ—ಸೂತ್ರ ಇಲ್ಲದೆ ಎರಡೂವರೆ ಲಕ್ಷ ನೌಕರರನ್ನು ಇಷ್ಟು ಚೆನ್ನಾಗಿ ಆರ್ಗನೈಸ್ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಸೂತ್ರವಿರುವುದರಿಂದಲೇ ಇವರಿಗೆ ಯಾವ ರೀತಿ ಸ್ಯಾಲರಿ ಕೊಡಬೇಕು ಎನ್ನುವುದು ಮಾಡಿರುವುದು, ಇವರಿಗೆ ಡಿ.ಎ.ಎಚ್.ಆರ್.ಎ. ಕೊಡಬೇಕಾದರೆ ನಾವು ಸೂತ್ರದ ಮೂಲಕವೇ ಕೊಡುತ್ತಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲಾಯ—ನಾರಾಯಣ ಪೈ ಕಮಿಷನ್ ವರದಿಯ ಪ್ರಕಾರ ನೌಕರರಿಗೆ ಸೌಲಭ್ಯಗಳನ್ನು ಕೊಡುತ್ತಿದ್ದು, ಇತ್ತೀಚಿನ ದಿವಸಗಳಲ್ಲಿ ಬೆಲೆಗಳ ಏರಿಕೆಯಿಂದಾಗಿ ತಾವು ಗೊತ್ತು ಮಾಡಿರುವ ಸೌಲಭ್ಯಗಳು ಅವರಿಗೆ ಸಾಕಾಗುವುದಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇವರಿಗೆ ಖರ್ಚು ಮಾಡುವುದು ಅನಿವಾರ್ಯವಾಗಿ ಮಾಡಬೇಕಾದ ಪೆಚ್ಚಿ. ಇದನ್ನು ಕಡಿಮೆ ಮಾಡುವ ಪ್ರಮೇಯವೇ ಇಲ್ಲ. ಆದ್ದರಿಂದ ಪರಿಸ್ಥಿತಿಗನುಗುಣವಾಗಿ ಅವರಿಗೆ ಅನುಕೂಲತೆಗಳನ್ನು ಕೊಡಬೇಕೆನ್ನುವುದು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಎಸ್. ಎಂ ಯಾಹ್ಯಾ— ಮಾನ್ಯ ಸದಸ್ಯರಾದ ಕಕ್ಕಿಲಾಯ ಅವರು ಒಂದು ದೃಷ್ಟಿಯಿಂದ ಪ್ರಶ್ನೆಯನ್ನು ಕೇಳಿದರೆ ಮಾನ್ಯ ಸದಸ್ಯರಾದ ಆನಂದಕುಂದ ಹೆಗಡೆಯವರು ಇನ್ನೊಂದು ದೃಷ್ಟಿಯಿಂದ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಎರಡು ಪ್ರಶ್ನೆಗಳಲ್ಲಿಯೂ ಬಹಳಷ್ಟು ಅರ್ಥವಿದೆ. ಬೆಲೆಗಳು ದಿನೇ ದಿನೇ ಏರುತ್ತಿರುವುದರಿಂದಲೇ ನಾವು ಅವರಿಗೆ ಹಾರ್ಡ್‌ಷಿಪ್ ಅಲೋಯನ್ಸ್ ಕೊಟ್ಟಿದ್ದೇವೆ ಮತ್ತು ಒಂದು ಕಂತು ಡಿ.ಎ. ಕೂಡ ಡಿಕ್ಲೇರ್ ಮಾಡಿದ್ದೇವೆ. ಮಾನ್ಯ ಹೆಗಡೆಯವರು ಸರ್ಕಾರದವರು ಡೆವಲಪ್‌ಮೆಂಟಲ್ ಆಕ್ಟಿವಿಟೀಸ್‌ಗೆ ಹೆಚ್ಚು ಹಣ ಕೊಡುತ್ತಿಲ್ಲ, ಎಂದು ಹೇಳುವುದರಲ್ಲಿಯೂ ಅರ್ಥವಿದೆ. ಅದಕ್ಕಾಗಿಯೇ ನಾವು ಈ ಎರಡನ್ನು ಬ್ಯಾಲೆನ್ಸ್ ಮಾಡಿಕೊಂಡು, ನೌಕರರಿಗೂ ಧಕ್ಕೆಯಾಗಬಾರದು. ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗೂ ತೊಂದರೆಯಾಗಬಾರದು ಎನ್ನುವ ರೀತಿಯಲ್ಲಿ ಕೆಲಸಮಾಡುತ್ತಿದ್ದೇವೆ,

SRI H. GANGADHARAN—I would like to know whether this Rs. 219.29 lakhs includes Travelling Allowance and D.A. Don't you think that there is over-employment in the Government ?

SRI S. M. YAHYA—It is not true that there is over-employment. It includes T.A. and other allowances. The details are as follows :

Pay of the officers-1978 Revised estimates Rs. 21 crores.
Pay of staff : Rs. 179 crores, 97 lakhs. 94 lakhs.

Other allowances Rs. 17 crores 4 lakhs.—D.A. is merged an therefore, it is not shown separately.

Release of encroached excise land to landless people in Arsikere Taluk

843. SRI D. B. GANGADHARAPPA (Arsikere)—Will the Minister for Labour and Excise be pleased to state:—

(a) the extent of Excise land encroached and since how many years in Arsikere Taluk;

(b) whether it is a fact that Poor people have constructed houses in Excise Lands in the said Taluk ;

(c) if so, whether the Goverment in end to consider their cases sympathetically and released the encroached land in favour of the landless people ?

SRI R. S. PATIL (Minister for Labour and Excise).—

(a) A total extent of 10.53 acres, 21 guntas of Excise Land has been encroached in Arsikere Taluk from the year 1960 and onwards. The details are furnished Hobliwise hereunder :

		A. G.
(1)	Kasaba Hobli ...	220—28
(2)	Javagal Hobli ...	85—00
(3)	Kanakatte Hobli ...	54—08
(4)	Gandasi Hobli ...	313—00
(5)	Banavara Hobli ...	380—25
	Total ...	1053—21

(b) Yes

(c) Yes

ಶ್ರೀ ಡಿ. ಬಿ. ಗಂಗಾಧರಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ, ೧೯೬೦ನೇ ಇಸವಿಯಿಂದ ೧೦೫೩ ಎಕರೆ, ಅಬಕಾರಿ ಜಮೀನನ್ನು ಎನ್‌ಕ್ರೋಚ್ ಮಾಡಿದ್ದಾರೆಂದು ತಿಳಿಸಿದ್ದೀರಿ. ಮತ್ತು ಇದನ್ನು ರಿಲೀಸ್ ಮಾಡುವ ಅವಶ್ಯಕತೆ ಇದೆಯೆಂದೂ ಸಹ ತಾವು ಹೇಳಿದ್ದೀರಿ, ಆದರೆ ಬಗ್ಗೆ ಏನು ಕಾರ್ಯ ಕ್ರಮವನ್ನು ತಾವು ತೆಗೆದುಕೊಂಡಿದ್ದೀರಿ, ಯಾವಾಗ ಅವರಿಗೆ ಜಮೀನನ್ನು ರಿಲೀಸ್ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು ?

† ಶ್ರೀ ಆರ್. ಎಸ್. ಪಾಟೀಲ್.—ಯಾವಾಗ ರಿಲೀಸ್ ಮಾಡುತ್ತೇವೆ, ಯಾವಾಗ ಅಬಕಾರಿ ಜಮೀನನ್ನು ಕೊಡುತ್ತೇವೆಂದು ಹೇಳುವುದು ಕಷ್ಟ. ಅಬಕಾರಿ ಜಮೀನು ಎನ್‌ಕ್ರೋಚ್‌ಮೆಂಟ್ ಆಗಿದೆಯೇ ಎಂದು ಕೇಳಿದ್ದಕ್ಕೆ, ಹೌದು ಎಂದು ಹೇಳಿದ್ದೇವೆ. ಎನ್‌ಕ್ರೋಚ್ ಮಾಡಿದವರ ಕಡೆಯಿಂದ ಅರ್ಜಿಗಳು ನಮಗೆ ಬಂದರೆ ಅವುಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಹಿಂದುಳಿದವರಿಗೆ ಸೂಕ್ತ ಪ್ರಾಶಸ್ಯ ಕೊಡುತ್ತೇವೆ. ಇದರಲ್ಲಿ ಯಾರಾದರೂ ಶ್ರೀಮಂತರು ಇದ್ದರೆ ಅವರಿಗೂ ಸಿಂಪತಿಟಿಕ್ ಆಗಿ ನೋಡಬೇಕು ಎಂದರೆ ಅದು ಆಗುವುದಿಲ್ಲ.

ಶ್ರೀ ಡಿ. ಬಿ. ಗಂಗಾಧರಪ್ಪ.—ನಾವು ಹಿಂದುಳಿದವರಿಗೆ, ಬಡವರಿಗೆ ಈ ಜಮೀನನ್ನು ಕೊಡಬೇಕ ಎಂದು ಕೇಳಿದ್ದೇವೆ. ನನಗೆ ತಿಳಿದಮಟ್ಟಿಗೆ, ಇಲಾಖೆಯವರಿಂದ ಶ್ರೀಮಂತರಿಗೆ ಕಿರುಕುಳ ಆಗುತ್ತಿಲ್ಲ, ಬಡವರಿಗೆ ಮಾತ್ರ ಕಿರುಕುಳ ಆಗುತ್ತದೆ. ದಯವಿಟ್ಟು ಇದರ ಬಗ್ಗೆ ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಆರ್. ಎಸ್. ಪಾಟೀಲ್.—ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇನೆ.

Sale Tax Collected on Arecanut

889. SRI L. T. THIMMAPPA HEGADE (Sagar).—Will the Minister or Finance be pleased to state :—

(a) the State tax collected on the sale of Arecanut per annum fince 1972-73 and up-to-date ;

(b) the amount of Central Sales Tax, the rates at which the same was collected each year ?